ಹುಲಸೂರನ್ನು ತಾಲ್ಲೂಕು ಕೇಂದ್ರವನ್ನಾಗಿ ರಚನೆ ಮಾಡುವುದು

153 (1833) ಶ್ರೀ ರಾಜೇಂದ್ರವರ್ಮ(ಹುಲಸೂರ್)) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯ ಸರ್ಕಾರವು ಹೊಸ ತಾಲ್ಲೂಕುಗಳನ್ನು ರಚನೆ ಮಾಡುರ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ಈ ಸಂಬಂಧ ಯಾವ ಕ್ರಮಗಳನ್ನು ಕೈಗೊಂಡಿದೆ?

2) ಇತ್ತೀಚೆಗೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ವಿಶೇಷ ತಹಸೀಲ್ದಾರರುಗಳನ್ನು ನಿಯೋಜನೆ ಮಾಡಿರುವುದು ನಿಜವೇ?

3) ಹಾಗಿದ್ದಲ್ಲಿ ಯಾವ ಯಾವ ಸ್ಥಳಗಳಿಗೆ ಈ ಅಧಿಕಾರಿಗಳನ್ನು ನಿಯೋಜನೆ ಮಾಡಲಾಗಿದೆ?

4) ಯಾವ ಯಾವ ಸ್ಥಳಗಳನ್ನು ಹೊಸ ತಾಲ್ಲೂಕುಗಳನ್ನಾಗಿ ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆ?

5) ಹುಲಸೂರು ವಿಧಾನಸಭಾ ಕ್ಷೇತ್ರವಾಗಿದ್ದು ಹಿಂದುಳಿದ ಪ್ರದೇಶವಾಗಿರುವುದರಿಂದ ಹೊಸ ತಾಲ್ಲೂಕು ಕೇಂದ್ರವನ್ನಾಗಿ ರಚನೆ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ; ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ(ಕಂದಾಯ ಸಚಿವರು):

1) ಹೊಸ ತಾಲ್ಲೂಕುಗಳನ್ನು ಸೃಜಿಸುವ ಅವಶ್ಯಕತೆ ಬಗ್ಗೆ ಈ ಹಿಂದಿನ 3 ಸಮಿತಿಗಳು ಪರಿಶೀಲಿಸಿವೆ, ಆದರೆ ಹೊಸ ತಾಲ್ಲೂಕುಗಳನ್ನು ಸೃಜಿಸುವ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ. ಆದರೆ ಆಡಳಿತದಲ್ಲಿ ದಕ್ಷತೆಯನ್ನು ವೃದ್ಧಿಸುವ ದೃಷ್ಟಿಯಿಂದ ಕೆಲವು ಸ್ಥಳಗಳಲ್ಲಿ ವಿಶೇಷ ತಹಸೀಲ್ದಾರರನ್ನು ನೇಮಿಸಲಾಗಿದೆ.

2) ಹೌದು

3)

1. ಬಬಲೇಶ್ವರ	-	ಬಿಜಾಪುರ ಜಿಲ್ಲೆ
2. ನಿಡಗುಂದಿ	-	ಬಿಜಾಪುರ ಜಿಲ್ಲೆ
3. ತಾಳಿಕೋಟೆ	-	ಬಿಜಾಪುರ ಜಿಲ್ಲೆ
4. ಇಳಕಲ್	-	ಬಾಗಲಕೋಟೆ ಜಿಲ್ಲೆ
5. ಗುಳೇದಗುಡ್ಡ	-	ಬಾಗಲಕೋಟೆ ಜಿಲ್ಲೆ
6. ಹನೂರು	-	ಚಾಮರಾಜನಗರ ಜಿಲ್ಲೆ
7. ಮೂಡಬಿದರೆ	-	ದಕ್ಷಿಣ ಕನ್ನಡ ಜಿಲ್ಲೆ
8. ಬೈಂದೂರು	-	ಉಡುಪಿ ಜಿಲ್ಲೆ
9. ಕುರುಗೋಡು	-	ಬಳ್ಳಾರಿ ಜಿಲ್ಲೆ
10. ಚಿಟಗುಪ್ಪ	-	ಬೀದರ್ ಜಿಲ್ಲೆ
11. ಕಿತ್ತೂರು	-	ಬೆಳಗಾಂ ಜಿಲ್ಲೆ
12. ಲಕ್ಷ್ಮೇಶ್ವರ್	-	ಗದಗ್ ಜಿಲ್ಲೆ

4) ಯಾವುದೇ ಹೊಸ ತಾಲ್ಲೂಕನ್ನು ಸೃಜಿಸುವ ಪ್ರಸ್ತಾವನೆಯು ಈಗ ಸರ್ಕಾರದ ಪರಿಶೀಲನೆಯಲ್ಲಿಲ್ಲ.

5) ಪ್ರಶ್ನೆ 4 ರಲ್ಲಿ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಾಜೇಂದ್ರ ವರ್ಮ:- ಮಾನ್ಯ ಅಧ್ಯಕ್ಷರೇ, ನನ್ನ ಮೊದಲನೆಯ ಪ್ರಶ್ನೆಗೆ "ಹೊಸದಾಗಿ ಯಾವುದೇ ತಾಲ್ಲೂಕುಗಳನ್ನು" ಮಾಡುವಂಥ ಪ್ರಕ್ರಿಯೆ ಸರ್ಕಾರದಲ್ಲಿ ನಡೆದಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಗಳು, ಫೆಬ್ರವರಿ 20ನೇ ತಾರೀಖು ಪತ್ರಿಕಾ ಹೇಳಿಕೆಯೊಂದನ್ನು ನೀಡಿದ್ದಾರೆ. ಅದೇನೆಂದರೆ, ಕುಲದೀಪ್ ಸಿಂಗ್ ನೇತೃತ್ವದ ಮತಕ್ಷೇತ್ರ ವಿಂಗಡಣಾ ಸಮಿತಿಯ ವರದಿಯು ಬಂದನಂತರ ನಾವು ತಾಲ್ಲೂಕುಗಳನ್ನು ಹೊಸದಾಗಿ ಮಾಡುವ ಬಗ್ಗೆ ಚಾಲನೆ ಕೊಡುತ್ತೇವೆಂದು ಹೇಳಿದ್ದಾರೆ. ಎರಡನೆಯದಾಗಿ, ಒಂದೇ ತಾಲ್ಲೂಕಿಗೆ ಇಬ್ಬಿಬ್ಬರು ತಹಶೀಲ್ದಾರರನ್ನು ನೇಮಕ ಮಾಡಿದ್ದಾರೆ. ನನ್ನ ಹುಲಸೂರ್ ಕ್ಷೇತ್ರ ಮೂರು ತಾಲ್ಲೂಕುಗಳಿಂದ ಕೂಡಿರುವ ವಿಧಾನಸಭಾ ಕ್ಷೇತ್ರವಾಗಿದೆ. ಇಲ್ಲಿಗೆ ಒಬ್ಬರು ತಹಶೀಲ್ದಾರರನ್ನು ನೇಮಕ ಮಾಡುವುದು ಅವಶ್ಯಕವಾಗಿರುತ್ತದೆ. ಆದರೆ ಒಂದೊಂದೇ ತಾಲ್ಲೂಕಿನಲ್ಲಿ ಇಬ್ಬಿಬ್ಬರು ತಹಶೀಲ್ದಾರರನ್ನು ನೇಮಿಸಿದ್ದಾರೆ. ಇದಕ್ಕೆ ಮಾನ್ಯ ಕಂದಾಯ ಸಚಿವರು ಸ್ಪಷ್ಟೀಕರಣ ಕೊಡಬೇಕು. ತಾಲ್ಲೂಕುಗಳನ್ನು ಮಾಡುವಂಥ ಸಂದರ್ಭ ಬಂದಾಗ, ತಾಲ್ಲೂಕುಗಳನ್ನು ಮಾಡುವುದಕ್ಕೆ ತಹಶೀಲ್ದಾರರುಗಳನ್ನು ನೇಮಕ ಮಾಡುವುದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಆದರೆ ವಿಧಾನಸಭಾ ಕ್ಷೇತ್ರದಲ್ಲಿ ಮೂರು ಮೂರು ತಾಲ್ಲೂಕುಗಳು ಸೇರಿ ಒಂದು ವಿಧಾನಸಭಾ ಕ್ಷೇತ್ರವಾಗಿರುತ್ತದೆ, ಅಂಥದಕ್ಕೆ ಮೊದಲ ಆದ್ಯತೆ ಮೇರೆಗೆ ಮಾಲ್ಲೂಕುಗಳನ್ನು ಮಾಡುವುದರ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೆ, ತಾಲ್ಲೂಕುಗಳನ್ನು ಮಾಡುವ ಬಗ್ಗೆ ಸರ್ಕಾರ ಯಾವುದೇ ತೀರ್ಮಾನಗಳನ್ನು ತೆಗೆದುಕೊಂಡಿಲ್ಲ. ಹುಂಡೇಕರ್ ಸಮಿತಿ, ವಾಸುದೇವ್ ಸಮಿತಿಯವರೇನು ಶಿಫಾರಸ್ಸು ಮಾಡಿದ್ದಾರೆ ಅದರ ಆಧಾರದ ಮೇಲೆ ಯಾವ ತಾಲ್ಲೂಕುಗಳಲ್ಲಿ ಕಾರ್ಯ ಒತ್ತಡ ಜಾಸ್ತಿ ಇದೆ ಅಲ್ಲಿಗೆ ವಿಶೇಷ ತಹಶೀಲ್ದಾರರನ್ನು ಪೋಸ್ಟ್ ಮಾಡಿ ಕಾರ್ಯ ಒತ್ತಡವನ್ನು ಕಡಿಮೆ ಮಾಡಿದ್ದೇವೆ. ಜಿಲ್ಲಾಧಿಕಾರಿಗಳ ಜೊತೆ ಇದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿ ಕೆಲಸದ ಅನುಕೂಲತೆಯ ದೃಷ್ಟಿಯಿಂದ ಇದನ್ನು ರಚನೆ ಮಾಡಿದ್ದೇವೆಯೇ ಹೊರತು ಹೊಸದಾಗಿ ತಾಲ್ಲೂಕುಗಳನ್ನು ಮಾಡತಕ್ಕಂಥ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ.

ಅಧ್ಯಕ್ಷರು:- ಆಯಿತಲ್ಲಾ, ಆಗಲೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ. Why should you repeat unnecessarily?

ಶ್ರೀ ರಾಜೇಂದ್ರ ವರ್ಮ:- ಮಾನ್ಯ ಅಧ್ಯಕ್ಷರೆ, ಇದು ನಾನು ಹೇಳಿರತಕ್ಕ ಮಾತಲ್ಲ. ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ರಾಜ್ಯದ ಮುಖ್ಯಸ್ಥರು, ಕರ್ನಾಟಕ ರಾಜ್ಯದ ಐದು ಕೋಟಿ ಜನತೆಯ ಮುಂದಾಳತ್ವವನ್ನು ಹೊತ್ತಿರತಕ್ಕ ಮಾನ್ಯ ಮುಖ್ಯಮಂತ್ರಿಗಳು ಪತ್ರಿಕಾ ಹೇಳಿಕೆಯಲ್ಲಿ ಈ ವಿಚಾರವನ್ನು ಹೇಳಿದ್ದಾರೆ. ಆದರೆ ಅದರ ಬಗ್ಗೆ ಸ್ಪಷ್ಟವಾಗಿ ಹೇಳತಕ್ಕ ವಿಚಾರವನ್ನು ಕಂದಾಯ ಸಚಿವರು ಮಾಡುತ್ತಿಲ್ಲ. ಮೂರು ತಾಲ್ಲೂಕುಗಳನ್ನು ಸೇರಿಸಿ ಒಂದು ವಿಧಾನಸಭಾ ಕ್ಷೇತ್ರವನ್ನಾಗಿ ಮಾಡಿರುವಂಥ ಸಂದರ್ಭದಲ್ಲಿ ಆ ಮೂರು ತಾಲ್ಲೂಕುಗಳಿಗೆ ಜನ ಓಡಾಡುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಈಗ ಹುಮ್ನಾಬಾದ್‌ನಲ್ಲಿ ಚಿಟಗುಪ್ಪ ತಾಲ್ಲೂಕಿಗೆ ಒಬ್ಬರು ವಿಶೇಷ ತಹಶೀಲ್ದಾರರನ್ನು ನೇಮಕ ಮಾಡಿದ್ದಾರೆ. ಅದನ್ನು ಅವರೇ ಉತ್ತರದಲ್ಲಿ ತೋರಿಸಿದ್ದಾರೆ. ಅದೇ ರೀತಿ ನಮ್ಮ ತಾಲ್ಲೂಕಿನಲ್ಲೂ ಸಹ ವಿಶೇಷ ತಹಶೀಲ್ದಾರರನ್ನು ನೇಮಿಸುವುದು ಬಹಳ ಅವಶ್ಯಕವಾಗಿದೆ. ಏಕೆಂದರೆ ಗಡಿಭಾಗದಲ್ಲಿ ಮರಾಠಿ ಜನರು ಜಾಸ್ತಿ ಇರುತ್ತಾರೆ. ಆದ್ದರಿಂದ ಜನರು ಯಾವುದೇ ತಹಶೀಲ್ದಾರರನ್ನು ಕೇಳಿದರೂ ಅವರು ನೇರವಾಗಿ ಉತ್ತರ ಕೊಡತಕ್ಕಂಥ

ಕೆಲಸ ಮಾಡುತ್ತಿಲ್ಲ. ಆದ್ದರಿಂದ ಪ್ರತ್ಯೇಕವಾಗಿ ನನ್ನ ಕ್ಷೇತ್ರಕ್ಕೆ ಒಬ್ಬರು ತಹಶೀಲ್ದಾರರನ್ನು ನೇಮಕ ಮಾಡಿದರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಕೆ.ಜಯಪ್ರಕಾಶ್ ಹೆಗಡೆ:- ವಿಶೇಷ ತಹಶೀಲ್ದಾರರನ್ನು ಕೆಲವು ಕಡೆ ನೇಮಕ ಮಾಡಿದ್ದೇವೆಂದು ಮಾನ್ಯ ಸಚಿವರು ಹೇಳಿದರು. ಇನ್ನೂ ಯಾವ್ಯಾವ ಸ್ಥಳಗಳಿಗೆ ವಿಶೇಷ ತಹಶೀಲ್ದಾರರನ್ನು ನೇಮಕ ಮಾಡಲು ತೀರ್ಮಾನ ತೆಗೆದುಕೊಂಡಿದ್ದಾರೆ ಎಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ:- ಶ್ರೀ ರಾಜೇಂದ್ರವರ್ಮರವರ ಪ್ರಶ್ನೆಗೆ ಹೇಳುವುದಾದರೆ, ಏನು ಮೂರು ಸಮಿತಿಗಳು ವರದಿ ಕೊಟ್ಟಿವೆ. ಅದರ ಆಧಾರದ ಮೇಲೆ ಸರ್ಕಾರ ಕಾರ್ಯ ಒತ್ತಡವನ್ನು ಕಡಿಮೆ ಮಾಡುವುದಕ್ಕೋಸ್ಕರ ವಿಶೇಷ ತಹಶೀಲ್ದಾರರನ್ನು ನೇಮಕ ಮಾಡಿದೆ, ಆ ಮೂರು ಸಮಿತಿಗಳ ವರದಿಯಲ್ಲಿ ಮಾನ್ಯ ಸದಸ್ಯರ ಹುಲಸೂರ್ ಕ್ಷೇತ್ರವನ್ನು ಶಿಫಾರಸ್ಸು ಮಾಡಿಲ್ಲ. ಕಾರ್ಯ ಒತ್ತಡವನ್ನು ಕಡಿಮೆ ಮಾಡುವುದಕೋಸ್ಕರ ಇದನ್ನು ಮಾಡಲಾಗಿದೆ. ಮುಂದೆ ತಾಲ್ಲೂಕು ರಚನೆ ಮಾಡತಕ್ಕ ಸಂದರ್ಭದಲ್ಲಿ ಅದನ್ನು ನಿಗಾ ಇಟ್ಟು ಮಾಡಲು ಪ್ರಯತ್ನ ಮಾಡಲಾಗಿದೆಯೇ ಹೊರತು ಅವರ ಕ್ಷೇತ್ರ ಅದರಲ್ಲಿ ಒಂದೇ ಇಲ್ಲ, ಯಾವ ಸಮಿತಿಯವರು ಅದನ್ನು ಶಿಫಾರಸ್ಸು ಮಾಡಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಗದಗ್ ತಾಲ್ಲೂಕು ಬಹಳ ದೊಡ್ಡ ತಾಲ್ಲೂಕು. ಅಲ್ಲಿ ಮುಳಗುಂದ ಪಟ್ಟಣ ಪಂಚಾಯಿತಿ ಇದೆ. ಗದಗ್ ತಾಲ್ಲೂಕಿನಲ್ಲಿ ಅನಿವಾರ್ಯವಾಗಿ ಇನ್ನೊಬ್ಬ ಉಪ ತಹಶೀಲ್ದಾರರನ್ನು ನೇಮಿಸಲೇಬೇಕಾಗುತ್ತದೆ. ಆದ್ದರಿಂದ ಮುಳಗುಂದ ಪಟ್ಟಣ ಪಂಚಾಯಿತಿಗೆ ಇಬ್ಬರು ಉಪ ತಹಶೀಲ್ದಾರರನ್ನು ನೇಮಿಸುತ್ತೀರಾ? ಎರಡನೆಯದಾಗಿ, ಗಜೇಂದ್ರಘಡವನ್ನು ತಾಲ್ಲೂಕು ಮಾಡಬೇಕೆಂದು ಸಮಿತಿಯು ಶಿಫಾರಸ್ಸಿನಲ್ಲೇ ಇದೆ. ಆದ್ದರಿಂದ ಗಜೇಂದ್ರಘಡಕ್ಕೆ ಏಕೆ ಉಪ ತಹಶೀಲ್ದಾರರನ್ನು ನೇಮಿಸಲಿಲ್ಲ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಗಜೇಂದ್ರಘಡಕ್ಕೆ ವಿಶೇಷ ತಹಶೀಲ್ದಾರರನ್ನು ಪೋಸ್ಟ್ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ತಹಶೀಲ್ದಾರರ ಸಂಖ್ಯೆ ನಮಗೆ ಇನ್ನೂ ದೊರೆಯುತ್ತಿಲ್ಲ. ದೊರೆತ ತಕ್ಷಣ ಆ ಕ್ಷೇತ್ರಕ್ಕೆ ತಹಶೀಲ್ದಾರರನ್ನು ನೇಮಕ ಮಾಡುತ್ತೇವೆ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಸಚಿವರು ಮುಳಗುಂದಕ್ಕೆ ವಿಶೇಷ ತಹಸೀಲ್ದಾರ್ ನೇಮಿಸುವ ಬಗ್ಗೆ ಏನೂ ತಿಳಿಸಲೇ ಇಲ್ಲವಲ್ಲಾ.

ಶ್ರೀ ಹೆಚ್. ಶ್ರೀಕಂಠಯ್ಯ:- ಮುಳಗುಂದಕ್ಕೆ ವಿಶೇಷ ತಹಸೀಲ್ದಾರ್ ನೇಮಿಸುವ ಬಗ್ಗೆ ನಾವು ಇನ್ನೂ ತೀರ್ಮಾನ ಮಾಡಿಲ್ಲ. ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಅಧ್ಯಕ್ಷರೇ, ನಮಗೆ ತಾಲ್ಲೂಕು ಮಾಡುವುದು ಬೇಕಾಗಿಲ್ಲ. ಅದನ್ನು ನಾವು ಕೇಳುವುದೇ ಇಲ್ಲ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೇ, ಈಗ ನೀವು ಮಾಡಿರತಕ್ಕದ್ದನ್ನು ನಾನು ಹೇಳುತ್ತೇನೆ. ಯಾವ್ಯಾವ ಸ್ಥಳಗಳಿಗೆ ವಿಶೇಷ ತಹಸೀಲ್ದಾರ್ ಗಳನ್ನು ನೇಮಕ ಮಾಡಿದ್ದೇವೆ ಎಂಬ ಬಗ್ಗೆ ನಾನು ನೀಡಿರುವ ಲಿಖಿತ ಉತ್ತರದಲ್ಲೇ ತಿಳಿಸಿದ್ದೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಗಡೆ:- ಮಾನ್ಯ ಸಚಿವರು ಉಳಿದ ಯಾವ್ಯಾವ ಸ್ಥಳಗಳಿಗೆ ವಿಶೇಷ ತಹಸೀಲ್ದಾರ್ ಅನ್ನು ನೇಮಕ ಮಾಡುತ್ತಾರೆ? ಈಗಾಗಲೇ ಬೇರೆ ಬೇರೆ ಕಡೆ ನೇಮಿಸಲು ತೀರ್ಮಾನ ತೆಗೆದುಕೊಳ್ಳಲಾಗಿದ್ದರೆ ಅದನ್ನು ಯಾವಾಗ ಮಾಡುತ್ತೀರಿ?

ಶ್ರೀ ಎಸ್.ಎಸ್.ಪಾಟೀಲ್:- ಮುಳಗುಂದಕ್ಕೆ ವಿಶೇಷ ತಹಸೀಲ್ದಾರ್ ನೇಮಿಸುವ ಬಗ್ಗೆ ಮಾನ್ಯ ಸಚಿವರು ದಯಮಾಡಿ ಪರಿಶೀಲಿಸಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಪಾಟೀಲರಿಗೆ ನಾನು ಆಗಲೇ ಅದನ್ನು ಪರಿಶೀಲಿಸುತ್ತೇನೆಂದು ಆಶ್ವಾಸನೆ ಕೊಟ್ಟಿದ್ದೇನೆ. ಬೇರೆ ಬೇರೆ ಕಡೆಗಳಲ್ಲಿ ವಿಶೇಷ ತಹಸೀಲ್ದಾರ್ ನೇಮಿಸಲು ನಾವು ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದರೆ ಅಂತಹ ಕಡೆಗಳಲ್ಲಿ ಖಂಡಿತವಾಗಿಯೂ ನಾವು ವಿಶೇಷ ತಹಸೀಲ್ದಾರ್ ಅನ್ನು ಪೋಸ್ಟಿಂಗ್ ಮಾಡುತ್ತೇವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಬ್ರಹ್ಮಾವರಕ್ಕೂ ವಿಶೇಷ ತಹಶೀಲ್ದಾರ್ ಅನ್ನು ನೇಮಕ ಮಾಡಲಾಗುತ್ತದೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅದು ನಿಮ್ಮ ಪರಿಶೀಲನೆಯಲ್ಲಿ ಇದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಅದು ಕೂಡ ನಮ್ಮ consideration ನಲ್ಲಿ ಇದೆ.

ಶ್ರೀ ಕರಡಿ ಸಂಗಣ್ಣ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೆಲವು ತಾಲ್ಲೂಕುಗಳಿಗೆ ವಿಶೇಷ ತಹಸೀಲ್ದಾರ್‌ಗಳನ್ನು ನೇಮಕ ಮಾಡಿದ್ದಾರೆ. ಅದೇ ರೀತಿಯಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಕನಕಗಿರಿ ಎಂಬ ವಿಧಾನಸಭಾ ಕ್ಷೇತ್ರವೊಂದಿದೆ. ಅದು ಗಂಗಾವತಿ ತಾಲ್ಲೂಕಿನಲ್ಲಿ ಇನ್‌ಕ್ಲೂಡ್ ಆಗಿದೆ. ಮಾನ್ಯ ಹುಂಡೇಕಾರ್ ಮತ್ತು ಮಾನ್ಯ ಗದ್ದೇಗೌಡರ ವರದಿಗಳಲ್ಲಿ ಕೂಡ ಇದನ್ನು ಮಾಡಬಹುದು ಎಂದು ಇದೆ. ಕನಕಗಿರಿ ಹಾಗೂ ಕಾರಟಗಿ ಈ ಎರಡು ಕಡೆಗಳಲ್ಲಿ ವಿಶೇಷ ತಹಸೀಲ್ದಾರ್‌ಗಳನ್ನು ನೇಮಿಸಲು ಸರ್ಕಾರ ಆಲೋಚಿಸಿದೆಯೋ? ಹೇಗೆ? ಕೊಪ್ಪಳ ಜಿಲ್ಲೆಗೆ ಸಂಬಂಧಪಟ್ಟಂತೆ ಸರ್ಕಾರ ಏನು ಯೋಚಿಸಿದೆ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸುತ್ತಾರೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾವು ವಿಶೇಷ ತಹಸೀಲ್ದಾರ್‌ಗಳನ್ನು ನೇಮಿಸಲು ತೀರ್ಮಾನ ತೆಗೆದುಕೊಂಡಿರತಕ್ಕಂಥ ಸ್ಥಳಗಳನ್ನು ಹೇಳಿದ್ದೇನೆ. ಉಳಿದ ಸ್ಥಳಗಳ ಬಗ್ಗೆ ನಾನು ಪರಿಶೀಲನೆ ಮಾಡಿ, ಜರೂರು ಇದ್ದರೆ ಅಂತಹ ಕಡೆಗಳಲ್ಲೂ ಸಹ ನೇಮಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ:- ಆ ಬಗ್ಗೆ ವರದಿಗಳಲ್ಲಿ ಹೇಳಿದ್ದಾರೆ. ಅದನ್ನು ಏಕೆ ಮಾಡಿಲ್ಲ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ವರದಿ ಪ್ರಕಾರವೇ ನಾವು ಮಾಡುತ್ತಿದ್ದೇವೆ.

ಅಧ್ಯಕ್ಷರು :- ಮಾನ್ಯ ಸಂಗಣ್ಣನವರೇ, ನಮ್ಮ ಮುಂದೆ ಇನ್ನೂ 8 ಪ್ರಶ್ನೆಗಳಿವೆ. ಆದರೆ ಪ್ರಶ್ನೋತ್ತರ ಅವಧಿಯಲ್ಲಿ ಉಳಿದಿರುವುದು ಇನ್ನು 20 ನಿಮಿಷಗಳು ಮಾತ್ರ. ದಯವಿಟ್ಟು ತಾವು ಇನ್ನಷ್ಟು ಸ್ಪಷ್ಟೀಕರಣ ಕೇಳಬೇಡಿ. ದಯವಿಟ್ಟು ತಾವು ಕುಳಿತುಕೊಳ್ಳಿ. ಈಗ ಮಾನ್ಯ ಬೈರೇಗೌಡರು ಸ್ಪಷ್ಟೀಕರಣ ಕೇಳಲು ನಾನು ಅವಕಾಶ ಮಾಡಿಕೊಡುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಈ ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಹಿಂದೆ ಯಾವುದೇ ಕಾಲದಲ್ಲಿ ವಿಂಗಡಣೆ ಮಾಡಿದ್ದಾರೆ. ಅವತ್ತು ಸರಿಯಾದಂತಹ ರಸ್ತೆ ಇರಲಿಲ್ಲ. ಟೆಲಿಫೋನ್ ಕನೆಕ್ಷನ್ ಇರಲಿಲ್ಲ, ಬೇರೆಯವರ ಜೊತೆಗೆ ಸಂಪರ್ಕ ಮಾಡುವುದಕ್ಕೂ ಕೂಡ ಬಹಳ ಕಷ್ಟ ಇತ್ತು. ಆದರೆ ಇವತ್ತಿನ ದಿವಸ ಅವೆಲ್ಲವೂ ಕೂಡ ಸಾಕಷ್ಟು ಸುಧಾರಣೆಯಾಗಿವೆ. ಇಂಟರ್‌ನೆಟ್‌ನಿಂದ ಒಂದೇ ನಿಮಿಷದಲ್ಲಿ ಪ್ರಪಂಚದ ಯಾವುದೇ ಮೂಲೆಯಿಂದಾಗಲೀ ನಮಗೆ ಬೇಕಾದ ಮಾಹಿತಿಯನ್ನು ತರಿಸಿಕೊಳ್ಳಲಿಕ್ಕೆ ಸಾಧ್ಯವಾಗಿದೆ. ಸರ್ಕಾರ ಕೂಡ ಇವತ್ತು e-governance ತರಲಿಕ್ಕೆ ಪ್ರಯತ್ನಪಡುತ್ತಿದೆ. ಯಾವುದೇ ಸರ್ಕಾರ ಇರಲಿ ಅಥವಾ ಯಾರೇ

ಸರ್ಕಾರ ನಡೆಸಲಿ, ಸರ್ಕಾರಿ ನೌಕರರು ಮತ್ತು ಅಧಿಕಾರಿಗಳು ಜಾಸ್ತಿಯಾದಷ್ಟು ಲಂಚ ತೆಗೆದುಕೊಳ್ಳತಕ್ಕಂಥ ಕೈಗಳು ಜಾಸ್ತಿಯಾಗುತ್ತವೆಯೇ ವಿನಃ ಜನಕ್ಕೆ ಸಿಗತಕ್ಕಂಥ ಪ್ರಯೋಜನ ಅಷ್ಟಾಗಿ ಏನೂ ಕೂಡ ಇಲ್ಲ. ಈ ದೃಷ್ಟಿಯಿಂದ ಈ ತಾಲ್ಲೂಕುಗಳನ್ನು ಮತ್ತು ಜಿಲ್ಲೆಗಳನ್ನು ಮಾಡತಕ್ಕದ್ದು ಸೂಕ್ತವಲ್ಲವೆಂಬುದು ನನ್ನ ಅಭಿಪ್ರಾಯವಾಗಿದೆ. ಆದರೆ ವಾಸ್ತವಾಂಶಗಳನ್ನು ಗಮನಿಸಿ, ಈ ಪ್ರಸ್ತಾವವನ್ನು ದಯವಿಟ್ಟು ಸರ್ಕಾರ ಕೈಬಿಡಬೇಕೆಂಬುದು ನನ್ನ ಆಗ್ರಹ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೇ, ಅದು ಮಾನ್ಯ ಬೈರೇಗೌಡರ ಅಭಿಪ್ರಾಯವಾಗಿದೆ. ಅದು ನನ್ನ ಅಭಿಪ್ರಾಯವೆಂದೇ ಅವರು ಹೇಳಿದರು. ಅವರ ಅಭಿಪ್ರಾಯವನ್ನೂ ಸಹ ನಾವು ಪರಿಶೀಲನೆಗೆ ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರಲ್ಲಿ ನನ್ನದೊಂದು ವಿನಂತಿ ಇದೆ. ಮಾನ್ಯ ಹುಂಡೇಕರ್ ಆಯೋಗವು ಬಹುಶಃ 10-15 ವರ್ಷಗಳ ಹಿಂದೆ ರಚನೆಯಾದಾಗಲೇ, ದಕ್ಷಿಣ ಕನ್ನಡ ಜಿಲ್ಲೆಯ ಭಾರಿ ಮಲೆನಾಡಿನ ಪ್ರದೇಶಗಳಾದ ಪುತ್ತೂರು, ಸುಳ್ಯ ಮತ್ತು ಬೆಳ್ತಂಗಡಿ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಕಡಬವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡಬೇಕು ಎಂಬ ಶಿಫಾರಸ್ಸನ್ನು ತನ್ನ ವರದಿಯಲ್ಲಿ ಮಾಡಿತ್ತು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂಡಬಿದರೆ, ಬ್ರಹ್ಮಾವರ ಇದೆಲ್ಲಕ್ಕಿಂತಲೂ ಮುಂಚಿತವಾಗಿ ಕಡಬ ತಾಲ್ಲೂಕು ರಚನೆಯಾಗಬೇಕು ಎಂಬ ಬಗ್ಗೆ ಶಿಫಾರಸ್ಸು ಒಳಗೊಂಡ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದರೂ ಕೂಡ ಇನ್ನೂವರೆಗೆ ಆ ಬಗ್ಗೆ ಸರ್ಕಾರ ಯಾವ ನಿಲುವನ್ನು ಹೊಂದಿದೆ. ಎಂಬ ಎಂಬ ಬಗ್ಗೆ ತಿಳಿಸಿಲ್ಲ. ಮಾನ್ಯ ಸಚಿವರು ಹೇಳಿರುವ ಲಿಸ್ಟ್‌ನಲ್ಲಿ ಅದು ಇಲ್ಲ. ಕಡಬ ತಾಲ್ಲೂಕನ್ನು ರಚನೆ ಮಾಡುವಂತಹ ಪ್ರಸ್ತಾಪ ಸರ್ಕಾರದ ಮುಂದಿದೆಯೇ? ಅಥವಾ ಇಲ್ಲವೇ? ಇಲ್ಲದಿದ್ದರೆ, ಏಕೆ? ಇದ್ದರೆ ಯಾವಾಗ ಮಾಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕೆಂದು ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೇ, ಕಡಬ ತಾಲ್ಲೂಕು ರಚನೆ ಮಾಡಬೇಕೆಂಬುದಕ್ಕೆ ಬದಲಾಗಿ ಕಡಬಕ್ಕೆ ವಿಸೇಷ ತಹಸೀಲ್ದಾರ್ ಪೋಸ್ಟ್ ಮಾಡುವುದರ ಬಗ್ಗೆ ಮಾತ್ರ ಕೇಳಿ. ತಾಲ್ಲೂಕು ರಚನೆ ಮಾಡಬೇಕೆನ್ನುವುದು ಇಲ್ಲಿ ಉದ್ಭವವಾಗುವುದಿಲ್ಲ. ಎಲ್ಲಿ ಮುಂದಾಲೋಚನೆ ಇತ್ತೋ, ಎಲ್ಲಿ ಕಾರ್ಯ ಒತ್ತಡ ಜಾಸ್ತಿ ಇದೆಯೋ ಅಂತಹ ಕಡೆಗಳಲ್ಲಿ ಮಾತ್ರ ವಿಶೇಷ ತಹಸೀಲ್ದಾರ್‌ಗಳನ್ನು ನೇಮಿಸುತ್ತಿದ್ದೇವೆ. ಕಡಬದಲ್ಲೂ ಸಹ ನೀವು ಹೇಳಿದಂತಹ ಅಂಶಗಳನ್ನು ಪರಿಶೀಲನೆ ಮಾಡಿ, ಸಾಧ್ಯವಾದಷ್ಟು ಮಟ್ಟಿಗೆ ಅವಶ್ಯಕತೆ ಇದ್ದರೆ ಅಲ್ಲೂ ಕೂಡ ವಿಶೇಷ ತಹಸೀಲ್ದಾರ್ ಅನ್ನು ನೇಮಕ ಮಾಡುವ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು:- ಕೊನೆಯದಾಗಿ, ಮಾನ್ಯ ಶಿವಾನಂದ ಪಾಟೀಲ್‌ರವರು ಉಪ ಪ್ರಶ್ನೆ ಕೇಳಲು ಅವಕಾಶ ಮಾಡಿಕೊಡುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೇ, ಇದೇ ವಿಚಾರಕ್ಕೆ ಸಂಬಂಧಿಸಿದಂತೆ ನನ್ನದೊಂದು ಪ್ರಶ್ನೆ un starred ಆಗಿದೆ. ಅದರಲ್ಲಿ ಮಾನ್ಯ ಕಂದಾಯ ಸಚಿವರು ಗದ್ದಿಗೌಡರ್, ವಾಸುದೇವನ್ ಮತ್ತು ಹುಂಡೇಕರ್ ಕಮಿಟಿ ವರದಿಗಳನ್ನು ಸರ್ಕಾರ ಒಪ್ಪಿಕೊಳ್ಳುವುದಾದರೆ 90 ಹೊಸ ತಾಲ್ಲೂಕುಗಳನ್ನು ಸೃಷ್ಟಿ ಮಾಡಬೇಕಾಗುತ್ತದೆ ಎಂದು ಉತ್ತರ ಕೊಟ್ಟಿದ್ದಾರೆ. ವಿಶೇಷ ತಹಸೀಲ್ದಾರ್ ಅನ್ನು ನೇಮಿಸುವುದರಿಂದ ಏನು ಪ್ರಯೋಜನ? ಅವನಿಗೆ ಏನು ಪವರ್ಸ್ ಇದೆ? Magisterial Power ಅಂತೂ ಅವನಿಗೆ ಇಲ್ಲವೇ ಇಲ್ಲ. ಹಿಂದೆ

ಇದ್ದಂತಹ ನಾಡ ಕಛೇರಿಗಳನ್ನೇ ತಾವು ಮುಂದುವರೆಸಬಹುದಾಗಿತ್ತು. ವಿಶೇಷ ತಹಸೀಲ್ದಾರ್ ಆಗಿ ನೇಮಕ ಮಾಡಿದವನಿಗೆ ವಿಶೇಷವಾದಂತಹ ಹಕ್ಕುಗಳೇ ಇಲ್ಲ. ಅವನಿಗೆ Magisterial Power ಇಲ್ಲ. Office establishment ಸಹ ಇಲ್ಲ. ಹಿಂದೆ ನೀವು ನಾಡ ಕಛೇರಿಗೆ ಒಬ್ಬ ಕಾರಕೂನ ಮತ್ತು ಪೀವನ್ ಅನ್ನು ಹೇಗೆ ಕೊಟ್ಟಿದ್ದೀರೋ ಅಷ್ಟನ್ನೇ ನೀವು ಇವನಿಗೂ ಕೂಡ ಕೊಡುತ್ತಿದ್ದೀರಿ. ಮಾನ್ಯ ಬೈರಗೌಡರು ಹೇಳಿದ ಹಾಗೆ, ಮಾಡುವುದಾದರೆ ಎಲ್ಲವನ್ನೂ ಏಕಕಾಲಕ್ಕೇ ಮಾಡಬೇಕಾಗಿತ್ತು. ಬಿಡುವುದಿದ್ದರೆ ಅಷ್ಟನ್ನೂ ಒಮ್ಮೆಗೇ ಬಿಡಬೇಕಾಗಿತ್ತು. ನಿಮಗೆ ಗೊತ್ತಿದೆ, ನಮ್ಮ ಜಿಲ್ಲೆಯಲ್ಲಿ 11 ಕಡೆ ಹೋರಾಟ ನಡೆದಿದೆ: ನೀವೇ flood gate open ಮಾಡಿದಂತಾಗುತ್ತದೆ. ಒಂದು uniform policy ಇದ್ದರೆ ಮಾಡಬೇಕು. ಇಲ್ಲದಿದ್ದರೆ ಇದನ್ನು ಬಿಟ್ಟು ಬಿಡಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೇ, ಹೋರಾಟ ನಾನಾ ರೀತಿಯಿಂದ ನಡೆಯುತ್ತದೆ. ಹೋರಾಟವನ್ನು ಗಮನದಲ್ಲಿಟ್ಟುಕೊಂಡು ಮಾಡುವುದಕ್ಕೆ ಸಾಧ್ಯವಿಲ್ಲ. ಇವತ್ತು ಮೂರು ಕಮಿಟಿಯವರು ಶಿಫಾರಸ್ಸು ಮಾಡಿದ್ದರೆ, ಅಲ್ಲಿ ಅನುಕೂಲತೆಗಳು ಇದ್ದರೆ, ಅಲ್ಲಿ ಮಾಡಬೇಕು ಎಂದು ಸರ್ಕಾರಕ್ಕೆ ಆಧಾರಸಹಿತವಾಗಿ ಪ್ರಸ್ತಾವನೆ ಬಂದಾಗ, ಖಂಡಿತವಾಗಿಯೂ ಕೂಡ ಮಾಡುತ್ತೇವೆ. ಅದರಲ್ಲಿ ಮಾನ್ಯ ಸದಸ್ಯರು ಯಾವ ಅನುಮಾನವನ್ನೂ ಕೂಡ ಇಟ್ಟುಕೊಳ್ಳಬೇಕಾಗಿಲ್ಲ.

ಶ್ರೀ ರಾಜೇಂದ್ರ ವರ್ಮ:- ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು:- ಇನ್ನೂ 8 ಪ್ರಶ್ನೆಗಳಿವೆ. ಆದರೆ ನಮಗೆ ಪ್ರಶ್ನೋತ್ತರ ಅವಧಿಯಲ್ಲಿ ಇನ್ನು 20 ನಿಮಿಷಗಳು ಮಾತ್ರ ಇವೆ. ಮಾನ್ಯ ಸದಸ್ಯರು ಈ ರೀತಿಯಾಗಿ ಉಪ ಪ್ರಶ್ನೆಗಳನ್ನು ಕೇಳುತ್ತಾ ಹೋದರೆ ಹೇಗೆ?

ಶ್ರೀ ರಾಜೇಂದ್ರ ವರ್ಮ:- ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ನಾನು ಹೇಳತಕ್ಕದ್ದು ಏನೆಂದರೆ, ಈ ಮೂರು ತಾಲ್ಲೂಕುಗಳು ಸೇರಿ ಯಾವೊಂದು ವಿಧಾನ ಸಭಾ ಕ್ಷೇತ್ರ ಇರುತ್ತದೋ ಅಂತಹ ಕಡೆ ವಿಶೇಷ ತಹಸೀಲ್ದಾರ್ ಅನ್ನು ನೇಮಕ ಮಾಡಲಿಲ್ಲ. ಬೇರೆ ತಾಲ್ಲೂಕಿನಲ್ಲಿ ಈಗಾಗಲೇ ಇದ್ದಂತಹ ತಹಸೀಲ್ದಾರ್ ಕಛೇರಿಯ ಜೊತೆಗೆ ಇನ್ನೊಂದು ಕಛೇರಿ ಮಾಡುತ್ತಾರೆ ಎಂದರೆ, ಇದು ತಾರತಮ್ಯವಾಗಿದೆ. ನಮ್ಮಲ್ಲಿ ಸ್ಪೆಷಲ್ ತಹಸೀಲ್ದಾರ್‌ರವರನ್ನು ನೇಮಿಸುವ ಅವಶ್ಯಕತೆ ಬಹಳಷ್ಟು ಇದೆ. ಮಾನ್ಯ ಸಚಿವರು ಅಲ್ಲಿ ನೇಮಕ ಮಾಡುತ್ತಾರೋ ಇಲ್ಲವೋ ಎಂಬ ಬಗ್ಗೆ ಬಹಳ ಸ್ಪಷ್ಟವಾಗಿ ನಮಗೆ ಹೇಳಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ:- ಮಾನ್ಯ ಅಧ್ಯಕ್ಷರೇ, ಸರ್ಕಾರ ಎಂದೂ ತಾರತಮ್ಯ ಮಾಡುವುದಿಲ್ಲ. ಸರ್ಕಾರ ತಾರತಮ್ಯ ಮಾಡುವುದಿಲ್ಲ ಎಂಬ ಭರವಸೆಯನ್ನು ತಾವು ಇಟ್ಟುಕೊಳ್ಳಬಹುದು. ಎಲ್ಲಿ ಜರೂರಾಗಿ ಆಗಬೇಕು ಎನ್ನತಕ್ಕಂಥ ಶಿಫಾರಸ್ಸು ಇದೆಯೋ, ಸರ್ಕಾರ ಎಲ್ಲಿ ಮಾಡಬೇಕು ಅನ್ನತಕ್ಕಂಥ ತೀರ್ಮಾನ ತೆಗೆದುಕೊಳ್ಳಬೇಕೋ, ಅಲ್ಲಿ ಖಂಡಿತವಾಗಿಯೂ ಮಾಡುತ್ತದೆ.

ಶ್ರೀ ರಾಜೇಂದ್ರ ವರ್ಮ:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಮಾನ್ಯ ಸಚಿವರು ಸ್ಪಷ್ಟವಾದ ಭರವಸೆಯನ್ನು ಮತ್ತು ಉತ್ತರವನ್ನು ನೀಡಿಲ್ಲ. ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ರಾಜೇಂದ್ರ ವರ್ಮ ಅವರು ಸಭಾತ್ಯಾಗ ಮಾಡಿದರು)